

ಚಿತ್ರ: ಎಚ್.ಸತೀಶ್

## ಅಂದು ಪ್ರಧಾನಿ ಉಳಿಸಿದ 'ಮೌನ ಕಣಿವೆ'

ಅರವತ್ತರ ದಶಕದ ಕೊನೆಯಲ್ಲಿ 'ಮೌನ ಕಣಿವೆ' ಎಂದು ಹೆಸರಾದ ಕೇರಳದ ಸೈರಂಧ್ರಿಕಣಿವೆಯಲ್ಲಿ ಜಲವಿದ್ಯುತ್ ಯೋಜನೆ ಜಾರಿಗೊಳಿಸಲು ಅಲ್ಲಿಯ ರಾಜ್ಯ ಸರ್ಕಾರ ಮುಂದಾಗಿತ್ತು. ಯೋಜನೆಗೆ ಆರಂಭದಿಂದಲೂ ಪರಿಸರವಾದಿಗಳಿಂದ ಪ್ರತಿಭಟನೆ ವ್ಯಕ್ತವಾಗಿತ್ತು. ಆಗಿನ ಪ್ರಧಾನಿ ಇಂದಿರಾಗಾಂಧಿಯವರು ತಜ್ಞರ ಸಮಿತಿ ಶಿಫಾರಸು ಮಾಡಿದ ಸಂರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡು, ಯೋಜನೆ ಮುಂದುವರೆಸಲು ರಾಜ್ಯ ಸರ್ಕಾರಕ್ಕೆ ಮೊದಲಿಗೆ ತಾತ್ವಿಕ ಒಪ್ಪಿಗೆ ನೀಡಿದ್ದರು. ಸಲೀಂ ಅಲಿಯವರಿಂದ ಹಿಡಿದು ಕೇರಳ ಸಾಹಿತ್ಯ ಅಕಾಡೆಮಿಯವರೆಗೆ ಹಲವು ಸ್ತರದಲ್ಲಿ ಪರಿಸರವಾದಿಗಳು 'ಸೇವ್ ಸೈಲೆಂಟ್ ವ್ಯಾಲಿ' ಆಂದೋಳನ ರೂಪಿಸಿದರು. ಈ ಯೋಜನೆಯಿಂದ, ಅವಸಾನದಂಚಿನಲ್ಲಿರುವ ಸಿಂಗಳೀಕಗಳ ಆವಾಸಸ್ಥಾನವಾಗಿರುವ ಇಡೀ ಮೌನಕಣಿವೆಯ ಜೈವಿಕ ವಲಯಕ್ಕೆ ಆಗುವ ಧಕ್ಕೆಯನ್ನು ಇಂದಿರಾಗಾಂಧಿಯವರಿಗೆ ಮನವರಿಕೆ ಮಾಡಿಸಿದರು. ಕೊನೆಗೂ 1980ರಲ್ಲಿ ಪ್ರಧಾನಿಯವರು ಯೋಜನೆಗೆ ಸಂಬಂಧಿತ ಎಲ್ಲ ವಿಚಾರಗಳನ್ನು ಚರ್ಚಿಸಿ, ಇತ್ಯರ್ಥಗೊಳಿಸುವವರೆಗೆ ತಕ್ಷಣವೇ ಯೋಜನೆಯನ್ನು ಸ್ಥಗಿತಗೊಳಿಸಬೇಕೆಂದು ಕೇರಳ ಸರ್ಕಾರಕ್ಕೆ ಪತ್ರಿಸಿದರು. ನಂತರ ಪ್ರೊಫೆಸರ್ ಎಂಜಿಕೆ ಮೆನನ್ ನೇತೃತ್ವದಲ್ಲಿ ರಚಿಸಿದ ಸಮಿತಿಯು ಯೋಜನೆಯಿಂದಾಗುವ ಪಾರಿಸರಿಕ ಹಾನಿಯ ಕುರಿತು ವಿವರವಾದ ವರದಿಯಲ್ಲಿ ಸಲ್ಲಿಸಿತು. ವರದಿಯನ್ನು ಕೂಲಕಂಷವಾಗಿ ಅಧ್ಯಯನ ಮಾಡಿದ ಇಂದಿರಾಗಾಂಧಿಯವರು ಜಲವಿದ್ಯುತ್ ಯೋಜನೆಯನ್ನು ಸಂಪೂರ್ಣವಾಗಿ ಕೈಬಿಡಲು ನಿರ್ಧರಿಸಿದರು. ವಿಪರ್ಯಾಸವೆಂದರೆ ಅಂದು 'ಮೌನ ಕಣಿವೆ'ಯನ್ನು ಪ್ರಧಾನಿ ಮಧ್ಯಸ್ತಿಕೆಯಲ್ಲಿ ಉಳಿಸಿಕೊಂಡ ಕೇರಳ ಸರ್ಕಾರ ಇಂದು ಬಂಡೀಪುರದ ಜೀವಜಾಲವನ್ನು, ಆ ಮೂಲಕ ನೀಲಗಿರಿ ಜೈವಿಕ ವಲಯವನ್ನು ಶಾಶ್ವತವಾಗಿ ಧಕ್ಕೆಪಡಿಸುವ ಯೋಜನೆಯ ಜಾರಿಗೆ ಜೋರುಕಂಠದಲ್ಲಿ ಮಾತಾಡುತ್ತಿದೆ. ಮತ್ತೀಗ ಕೇಂದ್ರವೂ ವಿಕಾಸ ಮಂತ್ರ ಪಠಣದೊಂದಿಗೆ ಹೆದ್ದಾರಿಗಡ್ಡವಾಗುವ ಎಲ್ಲವನ್ನು ನೆಲಸಮ ಮಾಡಲು ಕಟಿಬದ್ಧವಾಗಿದೆ!

ಕಾರಣಗಳಲ್ಲಿ ಒಂದು. ಆಮದು ಹೊರೆಯನ್ನು ಕಡಿಮೆ ಮಾಡಲು ಅಪರೂಪದ ಜೀವವೈವಿಧ್ಯದ ವಲಯವನ್ನು ಬಲಿಗೊಡಬೇಕೇ?

ಮನುಷ್ಯ ಮತ್ತು ಪ್ರಾಣಿಗಳ ಸಂಘರ್ಷ ಇಂದು ನಿನ್ನೆಯದಲ್ಲ, ನಿಜ. ಆದರೆ ಈಗಿನ ಅಭಿವೃದ್ಧಿಯ ವ್ಯಾಖ್ಯಾನ ಮತ್ತು ವೇಗ ನೋಡಿದರೆ, ಈ ಸಂಘರ್ಷ ಅವಸಾನದಂಚಿನಲ್ಲಿರುವ ಹಲವಾರು ಪ್ರಾಣಿಗಳು ಹೇಳಹೆಸರಿಲ್ಲದಂತೆ ನಾಶವಾಗಲು ಕಾರಣವಾಗುವುದರಲ್ಲಿ ಯಾವ ಸಂಶಯವೂ ಇಲ್ಲ ಎನ್ನಿಸುತ್ತದೆ. ನೀಲಗಿರಿ ಜೀವವಲಯದ ಒಂದು ಭಾಗಕ್ಕೆ ಧಕ್ಕೆಯಾದರೆ ಇನ್ನೊಂದರ ಮೇಲೂ ದುಷ್ಪರಿಣಾಮವಾಗುತ್ತದೆ. ವಿವಿಧ ಬಗೆಯ ವನ್ಯಜೀವಿ ಸಂಕುಲ ಮುಂದುವರಿಕೆ ಸಾಧ್ಯವಾಗುವುದಿದ್ದರೆ ಏಳು ಅರಣ್ಯ ಪ್ರದೇಶಗಳು ಪರಸ್ಪರ ಕೊಂಡಿಯಾಗಿರುವ ಈ ಭಾಗದಲ್ಲಿ ಮಾತ್ರ. ಸ್ವಾತಂತ್ರ್ಯ ಬಂದಾಗಿನಿಂದ ಈ ಅಭಯಾರಣ್ಯಗಳನ್ನು ಉಳಿಸಲು, ಬೆಳೆಸಲು ಕೋಟ್ಯಂತರ ರೂಪಾಯಿ ಹಣ ಖರ್ಚು ಮಾಡಿದ್ದೇವೆ. ಈಗ ಒಂದು ಹೆದ್ದಾರಿ ಅಗಲೀಕರಣಕ್ಕಾಗಿ ಲಕ್ಷಾಂತರ ವರ್ಷದ ಜೈವಿಕ ಇತಿಹಾಸವಿರುವ, ಈ ಅಪಾರ ಜೀವವಿಧ್ಯತೆಯನ್ನು ಬಲಿಗೊಡಬೇಕೆ?

'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎಂದರೆ ಕಾಡುಪ್ರಾಣಿಗಳನ್ನು ಹೊರತುಪಡಿಸಿ, ಇನ್ನುಳಿದವರ ವಿಕಾಸ ಎಂದೇ? ಅಭಿವೃದ್ಧಿ ಎಂದರೆ ಇಂತಹ ಹೆದ್ದಾರಿಗಳನ್ನು ನಿರ್ಮಿಸಿ, ಹಗಲಿನಲ್ಲಿಯೂ ಕಾಡುಪ್ರಾಣಿಗಳು ಆಚೆಯಿಂದ ಈಚೆಗೆ, ಈಚೆಯಿಂದ ಆಚೆಗೆ ದಾಟಲು ಕಷ್ಟವಾಗುವಂತೆ 8 ಮೀಟರ್ ಎತ್ತರದ ಉಕ್ಕಿನ ತಡೆಬೇಲಿ ನಿರ್ಮಿಸುವುದೇ? ಗೋಸಂರಕ್ಷಣೆಯ ಮಂತ್ರ ಜಪಿಸುತ್ತ ಟೊಂಕ ಕಟ್ಟಿ ನಿಂತವರಿಗೆ ಕಾಡುಪ್ರಾಣಿಗಳ ಮೊರೆ ಕೇಳುವುದಿಲ್ಲವೇಕೆ?

ಇದೀಗ ಪುಣ್ಯಕೋಟಿಯಲ್ಲ, ಬಂಡೀಪುರದ ವ್ಯಾಘ್ರಗಳೇ ಮುಂದೆ ನಿಂತು "ಖಂಡವಿದೆಕೋ ಮಾಂಸವಿದೆಕೋ" ಎಂದು ಕಾಡಿನ ಗುಂಡಿಗೆಯನ್ನು ಹೈವೇ ಯೋಜನೆಗೆ ಒಡ್ಡಿ, 'ಚಂಡ ಮನುಷ್ಯನೇ, ನೀನೆದಲ್ಲವ ನುಂಗಿ ಸಂತಸದಿಂದಿರು' ಎಂದು ಕಣ್ಣೀರಿಡುವ ಹತಾಶ ಪರಿಸ್ಥಿತಿ ಇದೆ. ಬಂಡೀಪುರದ ಹುಲಿರಾಯ ಮತ್ತದರ ಒಡನಾಡಿಗಳು ಈ 'ಅಭಿವೃದ್ಧಿ' ಗೀಳಿನ ನವಆಡಳಿತಶಾಹಿ ಯಂತ್ರದ ಶಿಕಾರಿಗಳಾಗಿ ಅಪಾಯದಲ್ಲಿದ್ದಾರೆ.